**ಸಾಕ್ಷಿಯನ್ನು ದಿಃ 16.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ-**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ, ಸತ್ಯವಾಗಿದೆ ಮತ್ತು ಸಹಿ ನನ್ನದೆ ಆಗಿದೆ.

**ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.**

| | |
|---|---|
| ನಿಪಿ.1 ರಿಂದ 4 | ದಾವಾ ಸ್ವತ್ತಿನ ಸರ್ವೆ ನಂ. 3/1, 3/2, 4, 35/1, ಗೆ ಸಂಬಂಧಿಸಿದ ಆರ್.ಟಿ.ಸಿಗಳು |
| ನಿಪಿ.5 | ದಿಃ 30.04.2024 ರಂದು 1 ಮತ್ತು 2 ನೇ ಪ್ರತಿವಾದಿಗಳಿಗೆ ವಕೀಲರ ಮೂಲಕ ಕಳುಹಿಸಿದ ಲೀಗಲ್ ನೊಟೀಸ್ ನ ಕಛೇರಿ ಪ್ರತಿ |
| ನಿಪಿ.6 ಮತ್ತು 7 | 2 ಅಂಚೆ ರಶೀದಿ |
| ನಿಪಿ.8 | 1 ನೇ ಪ್ರತಿವಾದಿ ದಿಃ 07.05.2024 ರಂದು ನೀಡಿದ ರಿಪ್ಲೆ ನೋಟಿಸು |
| ನಿಪಿ.9 | ದಿಃ 21.08.1981 ರಂದು ನಮ್ಮ ತಂದೆ ಹೆಚ್.ಎಸ್ ಪುಟ್ಟನಂಜಪ್ಪ ರವರು 1 ಮತ್ತು 2 ನೇ ಪ್ರತಿವಾದಿಗಳ ಹೆಸರಿಗೆ ಬರೆದಂತಹ ಗೀಫ್ಟ್ ಡೀಡ್ ನ ದೃಡೀಕೃತ ಪ್ರತಿ |
| ನಿಪಿ.10 | ಕರ್ಣಕುಪ್ಪೆ ಗ್ರಾಮ ಪಂಚಾಯಿತಿ ಪಿ.ಡಿ.ಓ ರವರು ನೀಡಿದ ಹಿಂಬರಹ |
| ನಿಪಿ.11 ರಿಂದ 17 | 7 ಟ್ಯಾಕ್ಸ್ ಪೇಡ್ ರಶೀದಿಗಳು |
| ನಿಪಿ.18 | ವಾದಿಯು ಕರ್ಣಕುಪ್ಪೆ ಗ್ರಾಮ ಪಂಚಾಯಿತಿಗೆ ನೀಡಿದ ಅರ್ಜಿಯ ಪ್ರತಿ |
| ನಿಪಿ.19 | ಅಂಚೆ ಸ್ವೀಕೃತಿ |

**ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.